**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ, ಸೊರಬ ಸೊರಬ**

**ಸಿ.ಸಿ.ನಂ: 16/2024**

**ಫಿರ್ಯಾದಿದಾರ:** ಕರ್ನಾಟಕ ಸರ್ಕಾರ
(ಸೊರಬ ಪೋಲಿಸ್ ವತಿಯಿಂದಾ)

ವಿರುದ್ಧ

**ಆರೋಪಿಃ** ಸಿರಾಜುದ್ದೀನ್ ಎಂ ಬಿನ್ ಶಹಾಉದ್ದೀನ
ವಯಸ್ಸುಃ 44 ವರ್ಷ,
ವಾಸಃ ಮಾರ್ಕೆಟ್ ರೋಡ್, ಸೊರಬ ಟೌನ್
ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ. 313 ರ ಅಡಿಯಲ್ಲಿ ಆರೋಪಿಯ ಹೇಳಿಕೆ**

ಪ್ರ.1. ನೀವು ಈ ಕೇಸಿನಲ್ಲಿ ಅಭಿಯೋಜನಾ ಪರ ಮಾಡಿರುವ ಸಾಕ್ಷಿಗಳ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರಃ

ಪ್ರ.2. **ಫ್ರಾ.ಸಾ.1 ಶ್ರೀ ಹೆಚ್.ವಿ. ಚಂದನ್ ಪಿರ್ಯಾದಿದಾರರಾಗಿದ್ದು** ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 22.11.2022 ರಂದು ನಾನು ಸೊರಬ ಪುರಸಭೆ ಮುಖ್ಯ ರಸ್ತೆಯಲ್ಲಿರುವ ಸುರಭಿ ಮಳಿಗೆಯನ್ನು ತೆರವುಗೊಳಿಸಲು ಹೋಗಿದ್ದಾಗ, ಆರೋಪಿಯಾದ ನೀವು ಮತ್ತು ಇತರೆ ಜನರು ಸೇರಿ ಗಲಾಟೆ ಮಾಡುತ್ತಿದ್ದಾಗ ಸಮಯ 10.30 ಆಗಿದ್ದು. ಸದರಿ ವಿಚಾರವನ್ನು ನಮ್ಮ ಕಛೇರಿಯ ಮುಖ್ಯ ಅಧಿಕಾರಿಗೆ ತಿಳಿಸಿ, ಸೊರಬ ಪೊಲೀಸ್ ಠಾಣೆಗೆ ಹೋಗಿ ನಿಪಿ.1 ರಂತೆ ದೂರನ್ನು ದಾಖಲಿಸಿರುವುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರ.3. **ಫ್ರಾ.ಸಾ.1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ** ಆರೋಪಿಯಾದ ನೀವು ತನಗೆ ಅವಾಚ್ಯ ಶಬ್ಧಗಳಿಂದ ಬೈದು ನಮ್ಮ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾನೆ ಮತ್ತು ಸದರಿ ಮಳಿಗೆಯನ್ನು ತೆರವುಗೊಳಿಸಿದಲ್ಲಿ ಜೀವ ಸಹಿತ ಬಿಡುವುದಿಲ್ಲ ಎಂದು ಜೀವಬೆದರಿಕೆ ಹಾಕಿರುವುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ.ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರ.4. **ಫ್ರಾ.ಸಾ.1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ** ನಂತರ ದಿನಾಂಕ 30.11.2022 ರಂದು ಸೊರಬ ಮುಖ್ಯ ರಸ್ತೆಯಲ್ಲಿರುವ ಸುರಭಿ ಮಳಿಗೆಯಲ್ಲಿ ತಾನು ಮತ್ತು ಚಾಸಾ-2 ಮತ್ತು 3

ರವರ ಸಮಕ್ಷಮ ಪೊಲೀಸರು ತಾನು ತೋರಿಸಿದ ಸ್ಥಳದಲ್ಲಿ ಬೆಳಗ್ಗೆ 10.30 ರಿಂದ 11.30 ಗಂಟೆಯವರೆಗೆ ನಿಪಿ.2 ರಂತೆ ಪಂಚನಾಮೆ, ನಿಪಿ.3 ರಂತೆ ಭಾವಚಿತ್ರ ಹಾಗೂ ನಿಪಿ.4 ರಂತೆ ಕಚ್ಚಾ ನಕಾಶೆಯನ್ನು ತಯಾರಿಸಿದಾಗ ತಾನು ಗಲಾಟೆಯನ್ನು ಕಣ್ಣಾರೆ ನೋಡಿದ ಬಗ್ಗೆ ಆ ದಿನ ಆರೋಪಿಯ ಹೆಂಡತಿ ಸುಲ್ತಾನ್ ಬೇಗಂ ಘಟನಾ ಸ್ಥಳದಲ್ಲಿ ಇದ್ದು, ಆದರೆ ಸುಲ್ತಾನ್ ಬೇಗಂ ರವರು ನಮ್ಮ ಕರ್ತವ್ಯ ಅಡ್ಡಿಪಡಿಸಿರುವುದಿಲ್ಲ ಎಂದು ಮರುಹೇಳಿಕೆ ನೀಡಿರುವುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರ.5. **ಫ್ರಾ.ಸಾ.2 ಶ್ರೀ ಲಕ್ಷ್ಮೀನಾರಾಯಣ ಮಹಜರ್ ಸಾಕ್ಷಿದಾರರಾಗಿದ್ದು,** ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 30.11.2022 ರಂದು ತಾನು ಸೊರಬ ಮುಖ್ಯ ರಸ್ತೆಯಲ್ಲಿರುವ ಸುರಭಿ ಕಾಂಪ್ಲೆಕ್ಸ್ ಬಳಿ ಗಲಾಟೆಯ ವಿಚಾರವಾಗಿ ಪಂಚನಾಮೆಗೆ ಸಹಿ ಹಾಕಿರುತ್ತೇನೆ. ಸದರಿ ಪಂಚನಾಮೆಯನ್ನು ಬೆಳಗ್ಗೆ 11.30 ರಿಂದ 12.00 ಗಂಟೆಯವರಗೆ ಜರುಗಿಸಿರುತ್ತಾರೆ. ತನಗೆ ಬೇರೆ ಯಾವುದೇ ವಿಚಾರ ಗೊತ್ತಿರುವುದಿಲ್ಲ. ಸಾಕ್ಷಿಗೆ ನಿಪಿ.2 ರಂತೆ ಪಂಚನಾಮೆ, ನಿಪಿ.4 ರಂತೆ ಕಚ್ಚಾ ನಕಾಶೆಯನ್ನು ಹಾಗೂ ನಿಪಿ .3 ರಂತೆ ಭಾವಚಿತ್ರಗಳನ್ನು ತೋರಿಸಿದಾಗ ಅದರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುವುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರ.6. **ಫ್ರಾ.ಸಾ.3 ಶ್ರೀ ಪ್ರಶಾಂತ್ ಪ್ರತ್ಯೇಕ್ಷ ಸಾಕ್ಷಿದಾರರಾಗಿದ್ದು,** ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 24.11.2022 ರಂದು ಸುರಭಿ ಕಾಂಪ್ಲೆಕ್ಸ್ ಮಳಿಗೆಯಲ್ಲಿ ಪುಟ್ ಪಾತ್ ನಲ್ಲಿರುವ ಅಂಗಡಿಗಳನ್ನು ತೆರವುಗೊಳಿಸಲು ಹೋದಾಗ ಆರೋಪಿಯಾದ ನೀವು ಅವಾಚ್ಯ ಶಬ್ದಗಳಿಂದ ಚಾಸಾ.1 ರವರಿಗೆ ಬೈದಿರುತ್ತಾನೆ ಎಂಬ ವಿಚಾರ ತನಗೆ ತಿಳಿದಾಗ ಸಮಯ ಬೆಳಗ್ಗೆ 10.30 ಆಗಿತ್ತು. ಆಗ ಸ್ಥಳದಲ್ಲಿ ತಾನು ಮತ್ತು ಚಾಸಾ.1, 4, 6 ರಿಂದ 9 ರವರು ಇರುತ್ತೇವೆ. ಈ ಬಗ್ಗೆ ತನ್ನನ್ನು ಪೊಲೀಸರು ತನ್ನನ್ನು ವಿಚಾರ ಮಾಡಿರುತ್ತಾರೆ. ತಾನು ಆ ದಿನ ಬೈದ ವ್ಯಕ್ತಿಯನ್ನು ನೋಡಿದರೆ ಗುರುತಿಸಲು ಸಾಧ್ಯವಿಲ್ಲ. ಏಕೆಂದರೆ ಆ ದಿನ ಸ್ಥಳದಲ್ಲಿ ತುಂಬಾ ಜನ ಇದ್ದಿದ್ದರಿಂದ ಅವರನ್ನು ನೋಡಿದರೆ ಗುರುತಿಸಲು ಸಾಧ್ಯವಿಲ್ಲವೆಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರ.7. **ಫ್ರಾ.ಸಾ.5 ಶ್ರೀ ಸಂತೋಷ್ ಪ್ರತ್ಯೇಕ್ಷ ಸಾಕ್ಷಿದಾರರಾಗಿದ್ದು,** ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 22.11.2022 ರಂದು 10.30 ರ ಸಮಯದಲ್ಲಿ ಸೊರಬ ಟೌನ್ ನ ಪುಟ್ ಪಾತ್ ನಲ್ಲಿರುವ ಅಂಗಡಿಗಳನ್ನು ತೆರವುಗೊಳಿಸಲು ಹೇಳಿದ್ದು, ನಾವು ತೆರವುಗೊಳಿಸಲು ಹೋದಾಗ ಚಾಸಾ.1 ರವರು ನಮ್ಮೊಂದಿಗೆ ಇದ್ದು, ಆರೋಪಿಯಾದ ನೀವು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ. ನಾವು ಅಂಗಡಿಗಳನ್ನು ತೆರವುಗೊಳಿಸಲು ಆರೋಪಿಯು ಅಡ್ಡಿಪಡಿಸಿರುತ್ತಾನೆ. ನಂತರ ನಾವು ಅಲ್ಲಿಂದ ಹೊರಟು ಬಂದಿರುತ್ತೇವೆ. ಆ ದಿನ ನಾವು ಯಾವ ವ್ಯಕ್ತಿ ಬೈದಿರುತ್ತಾನೆ ಎಂದು ನೋಡಿರುವುದಿಲ್ಲ.

ತಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲವೆಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರ.8.**ಪ್ರಾ.7 ಶ್ರೀ ಉಮೇಶ ಪ್ರತ್ಯೇಕ್ಷ ಸಾಕ್ಷಿದಾರರಾಗಿದ್ದು,** ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 22.11.2022 ರಂದು 10.30 ರ ಸಮಯದಲ್ಲಿ ಸೊರಬ ಟೌನ್ ನ ಪುಟ್ ಪಾತ್ ನಲ್ಲಿರುವ ಅಂಗಡಿಗಳನ್ನು ತೆರವುಗೊಳಿಸಲು ಹೇಳಿದ್ದು, ನಾವು ತೆರವುಗೊಳಿಸಲು ಹೋದಾಗ ಚಾಸಾ.1 ರವರು ನಮ್ಮೊಂದಿಗೆ ಇದ್ದು, ಆರೋಪಿಯಾದ ನೀವು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ. ನಾವು ಅಂಗಡಿಗಳನ್ನು ತೆರವುಗೊಳಿಸಲು ಆರೋಪಿಯು ಅಡ್ಡಿಪಡಿಸಿರುತ್ತಾನೆ. ನಂತರ ನಾವು ಅಲ್ಲಿಂದ ಹೊರಟು ಬಂದಿರುತ್ತೇವೆ. ಆ ದಿನ ನಾವು ಯಾವ ವ್ಯಕ್ತಿ ಬೈದಿರುತ್ತಾನೆ ಎಂದು ನೋಡಿರುವುದಿಲ್ಲ. ತಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲವೆಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರ.9.**ಪ್ರಾ.ಸಾ.8 ಶ್ರೀ ನಾಗರಾಜ ಹೆಚ್.ಎನ್ ತನಿಖಾಧಿಕಾರಿಯಾಗಿದ್ದು,** ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 02.01.2023 ರಂದು ಚಾಸಾ.1 ರವರು ಸೊರಬ ಪುರಸಭೆಯಲ್ಲಿ ದಿನಾಂಕ02.01.2023 ರಂದು ಕರ್ತವ್ಯ ನಿರ್ವಹಿಸಿದ ಬಗ್ಗೆ ದೃಢೀಕರಣ ಪತ್ರವನ್ನು ನೀಡುವಂತೆ ಪುರಸಭೆ ಮುಖ್ಯಾಧಿಕಾರಿಗಳು ಸೊರಬ ರವರಿಗೆ ನಿವೇದನೆಯನ್ನು ಸಲ್ಲಿಸಿದ್ದು. ದಿನಾಂಕ 18.07.2023 ರಂದು ಪುರಸಭೆ ಮುಖ್ಯಾಧಿಕಾರಿಗಳು ಚಾಸಾ–1 ರವರು ದಿನಾಂಕ 02.06.2022 ರಿಂದ ಇಲ್ಲಿಯವರೆಗೆ ಪರಿಸರ ಅಭಿಯಂತರರಾಗಿ ನಮ್ಮ ಪುರಸಭೆ ಸೊರಬ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದು ನಿಪಿ.9 ರಂತೆ ದೃಢೀಕರಣ ಮತ್ತು ನಿಪಿ.8 ರಂತೆ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ತನಿಖೆ ಪೂರ್ಣಗೊಂಡು ನಿಮ್ಮ ವಿರುದ್ದ ಸಾಕಷ್ಟು ಸಾಕ್ಷ್ಯಾಧಾರಗಳು ಲಭ್ಯವಾದ ಕಾರಣ ನಿಮ್ಮ ವಿರುದ್ದ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಾಣೆ ಪಟ್ಟಿಯನ್ನು ಸಲ್ಲಿಸಿರುವುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರ.10.**ಪ್ರಾ.ಸಾ.9 ಶ್ರೀ ದೇವರಾಜ ತನಿಖಾಧಿಕಾರಿಯಾಗಿದ್ದು,** ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 24.11.2022 ರಂದು ಚಾಸಾ1 ರವರು ನೀಡಿದ ನಿಪಿ.1 ರಂತೆ ಲಿಖಿತ ದೂರನ್ನು ಸ್ವೀಕರಿಸಿಕೊಂಡು ಠಾಣಾ ಗುನ್ನಾ ಸಂಖ್ಯೆ 168/2022 ರಂತೆ ನಿಪಿ.10 ರಂತೆ ಪ್ರಥಮ ವರ್ತಮಾವ ವರದಿಯನ್ನು ತಯಾರಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ಸಲ್ಲಿಸಿಕೊಂಡಿದ್ದು. ದಿನಾಂಕ 30.11.2022 ರಂದು ಚಾಸಾ.2 ಮತ್ತು 3 ರವರ ಸಮಕ್ಷಮ ಚಾಸಾ.1 ರವರು ತೋರಿಸಿದ ಘಟನಾ ಸ್ಥಳದಲ್ಲಿ ಬೆಳಗ್ಗೆ 10.00 ರಿಂದ 11.00 ಗಂಟೆಯವರೆಗೆ ನಿಪಿ.2 ರಂತೆ ಪಂಚನಾಮೆಯನ್ನು ಜರುಗಿಸಿ ಪಂಚರ ನಿಪಿ.2 ಎ ಎಂದು ಸಹಿಯನ್ನು ಪಡೆದಿರುತ್ತೇನೆ ಮತ್ತು ನಿಪಿ.4 ರಂತೆ ಭಾವಚಿತ್ರಗಳನ್ನು

ಹಾಗೂ ನಿಪಿ.3 ರಂತೆ ಕಚ್ಚಾ ನಕಾಶೆಯನ್ನು ಗುರುತಿಸಿರುವುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ.ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರ.11.**ಪ್ರಾ.ಸಾ.9 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ,** ದಿನಾಂಕ 30.11.2022 ರಂದು ಚಾಸಾ-4 ರಿಂದ 9 ರವರ ನಿಪಿ.5 ರಿಂದ 8 ರಂತೆ ಹೇಳಿಕೆಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡು 1 ಮತ್ತು 2ನೇ ಆರೋಪಿತರು ಠಾಣೆಗೆ ಹಾಜರಾಗಿದ್ದು, ಕಾನೂನು ಕ್ರಮದಡಿಯಲ್ಲಿ ಬಿಡುಗಡೆಗೊಳಿಸಿರುತ್ತೇನೆ. ದಿನಾಂಕ 20.01.2023 ರಂದು ಸದರಿ ಪ್ರಕರಣದಲ್ಲಿ ಹಾಜರುಪಡಿಸಿದ ಭಾವಚಿತ್ರಗಳಿಗೆ ಸಂಬಂಧಿಸಿದಂತೆ ಭಾ.ಸಾ.ಅಧಿನಿಯಮ ಕಲಂ 65 ಬಿ ಅಡಿಯಲ್ಲಿ ಪ್ರಮಾಣ ಪತ್ರವನ್ನು ನಿಪಿ.11 ರಂತೆ ಹಾಜರುಪಡಿಸಿರುತ್ತೇನೆ. ಚಾಸಾ.1 ರವರ ಕರ್ತವ್ಯ ದೃಢೀಕರಣ ಪತ್ರವನ್ನು ನಿಪಿ.9 ರಂತೆ ಚಾಸಾ-10 ರವರಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡು ಸದರಿ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.13 ರವರಿಗೆ ಹಸ್ತಾಂತರಿಸಿರುವುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರ 12. ನಿಮ್ಮ ಪರ ಯಾರಿಗಾದರೂ ಸಾಕ್ಷಿ ಮಾಡಿಸುತ್ತೀರಾ?

ಉತ್ತರಃ

ಪ್ರ 13. ನೀವು ಹೆಚ್ಚಿಗೆ ಏನಾದರೂ ಹೇಳುವುದು ಇದೆಯಾ?

ಉತ್ತರಃ

(ದಿಃ 07.07.2026 ರಂದು ಮೇಲ್ಕಂಡ ಹೇಳಿಕೆಯು ಆರೋಪಿಯಿಂದ ನೀಡಲ್ಪಟ್ಟಿದ್ದು ನಿಜವಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸಿದೆ.)

**ಪ್ರಧಾನ ಸಿವಿಲ್ ನ್ಯಾಯಾದೀಶರು ಮತ್ತು**
**ಜೆ.ಎಮ್.ಫ್.ಸಿ. ಸೊರಬ.**

***